


# ಶಿಕ್ಷಣದ ಯಥಾರ್ಥರೂಪ

ಂದೂ ಸಂಸ್ಕೃತಿಯಲ್ಲಿರುವ ಒಂದು ವೈಶಿಷ್ಟ್ಯವೆಂದರೆ ಇಲ್ಲಿ ಪ್ರತಿಯೊಂದು ವಿಷಯಕ್ಕೂ ಧರ್ಮವೇ ಕೇಂದ್ರವಾಗಿರುವುದು. ಸಾಹಿತ್ಯ, ಸಂಗೀತ, ಚಿತ್ರಕಲೆ—ಹೀಗೆ ಯಾವುದೇ ಕ್ಷೇತ್ರವನ್ನು ತೆಗೆದುಕೊಳ್ಳಿ, ಅವೆಲ್ಲ ಧರ್ಮವನ್ನೇ ಕೇಂದ್ರವನ್ನಾಗಿಟ್ಟುಕೊಂಡಿವೆ. ಹಾಗೆಯೇ ವಿವಿಧ ಮನರಂಜನಾ ಕಾರ್ಯಕ್ರಮಗಳೂ ಕೂಡ ಧರ್ಮದ ಸುತ್ತ ಹೆಣೆಯಲ್ಪಟ್ಟಿವೆ. ಯಕ್ಷಗಾನ, ನಾಟಕ, ನೃತ್ಯ ಇವುಗಳಲ್ಲೆಲ್ಲ ಧಾರ್ಮಿಕ ವಿಷಯವೆ ಪ್ರಧಾನ. ಧಾರ್ಮಿಕ-ಆಧ್ಯಾತ್ಮಿಕ ಪ್ರಜ್ಞೆಯನ್ನು ಜನರಲ್ಲಿ ಉಳಿಸಿಕೊಂಡು ಬರಬೇಕು ಎಂಬ ದೃಷ್ಟಿಯಿಂದ ಹಿಂದಿನವರು ಈ ಒಂದು ಸಂಪ್ರದಾಯವನ್ನು ಮಾಡಿರುವರು. ಹೀಗೆಯೇ ಶಿಕ್ಷಣದ ಹಿನ್ನೆಲೆಯೂ ಧರ್ಮವಾಗಿರಬೇಕು. ಆದ್ದರಿಂದ ಸ್ವಾಮಿ ವಿವೇಕಾನಂದರು "ವಿದ್ಯಾಭ್ಯಾಸ ಎಂದರೆ ನಮ್ಮೊಳಗೇ ಇರುವ ಪರಿಪೂರ್ಣತೆಯ ಅಭಿವ್ಯಕ್ತಿ" ಎಂದು ಶಿಕ್ಷಣದ ನಿರ್ವಚನ ನೀಡುತ್ತಾರೆ. ಈ ಪರಿಪೂರ್ಣತೆಯ ಅಭಿವ್ಯಕ್ತಿಗೆ ತಡೆಯನ್ನುಂಟು ಮಾಡುವುದು ದ್ವೇಷ, ಅಸೂಯೆ, ಅಹಂಕಾರ ಇತ್ಯಾದಿಗಳು. ಸೂರ್ಯನನ್ನು ಮೋಡ ಆವರಿಸುವಂತೆ ಇವು ನಮ್ಮ ಆತ್ಮವನ್ನು ಆವರಿಸುವುವು. ಇವನ್ನು ತೆಗೆದಾಗ ಆತ್ಮದ ಪರಿಪೂರ್ಣತೆ, ಆತ್ಮದ ಸೌಂದರ್ಯ ಅಭಿವ್ಯಕ್ತವಾಗುವುದು. ಇದೇ ನಿಜವಾದ ಶಿಕ್ಷಣದ ಗುರಿ. ನಮ್ಮನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡುವುದು ಶಿಕ್ಷಣದ ಗುರಿ. ಎಲ್ಲ ರೀತಿಯಲ್ಲಿಯೂ ನಾವು ಪರಿಪೂರ್ಣರಾಗಿರಬೇಕು. ನೈತಿಕವಾಗಿ, ವೈಚಾರಿಕವಾಗಿ, ಕೆಲಸ ಕಾರ್ಯಗಳಲ್ಲಿ, ಓದುವುದರಲ್ಲಿ—ಹೀಗೆ ಪ್ರತಿಯೊಂದರಲ್ಲೂ ನಾವು ಪರಿಪೂರ್ಣರಾಗಿರಬೇಕು. ದೈಹಿಕ, ಮಾನಸಿಕ, ಆಧ್ಯಾತ್ಮಿಕ ಪರಿಪೂರ್ಣತೆ ಶಿಕ್ಷಣದ ಗುರಿ. ಅಂದರೆ ಪೂರ್ಣ ವ್ಯಕ್ತಿತ್ವದ ವಿಕಾಸವಾಗಬೇಕು. ಕೇವಲ ವಿಷಯಸಂಗ್ರಹ ಶಿಕ್ಷಣದ ಗುರಿಯಲ್ಲ. ಅದೇ ಶಿಕ್ಷಣದ ಗುರಿಯಾಗಿದ್ದಿದ್ದರೆ ಪುಸ್ತಕಭಂಡಾರವನ್ನೇ ಒಂದು ವಿದ್ಯಾವಂತ ಎನ್ನಬಹುದಿತ್ತು. ಒಂದೊಂದು ಪುಸ್ತಕದಲ್ಲೂ ಎಷ್ಟೊಂದು ವಿಷಯಸಂಗ್ರಹವಿರುತ್ತದೆ! ಆದರೆ ಪುಸ್ತಕ ಕೇವಲ ಪುಸ್ತಕವೆ. ಬರಿಯ ವಿಷಯ ಸಂಗ್ರಹದಿಂದ ನಾವು ಒಂದು ಚಲಿಸುವ ವಿಶ್ವಕೋಶ ಆಗುತ್ತೇವೆ ಅಷ್ಟೆ. ಮಾಹಿತಿ ಸಂಗ್ರಹ ಶಿಕ್ಷಣವಲ್ಲ. ಅತಿಯಾದ ಮಾಹಿತಿ ಸಂಗ್ರಹದಿಂದ ವಿಚಾರಶಕ್ತಿಯನ್ನೂ ಕಳೆದುಕೊಳ್ಳುತ್ತೇವೆ, ಜ್ಞಾನಾಭಿರುಚಿಯೂ ಹೊರಟುಹೋಗುತ್ತದೆ ಎಂದು ಪ್ರಾಜ್ಞರು ಅಭಿಪ್ರಾಯಪಡುತ್ತಾರೆ.

ಪರಿಪೂರ್ಣತೆ ನಮ್ಮೊಳಗೇ ಇದೆ, ನಾವು ಹೊರಗಡೆಯಿಂದ ಪಡೆಯಬೇಕಾಗಿಲ್ಲ ಎಂದು ಸ್ವಾಮೀಜಿಯವರು ಹೇಳುತ್ತಾರೆ. ನಮ್ಮೊಳಗೆ ಪವಿತ್ರತೆ, ದಿವ್ಯತೆ, ಶಕ್ತಿ, ಪರಿಪೂರ್ಣತೆ ಎಲ್ಲ ಇವೆ. ಇವೆಲ್ಲ ನಮ್ಮ ಆತ್ಮದ ಗುಣಗಳು. ಈ ಆತ್ಮದ ವಿಕಾಸವೇ, ಅಂದರೆ ಈ ಎಲ್ಲ ಗುಣಗಳನ್ನು ಪ್ರಕಾಶಗೊಳಿಸುವುದೇ ಶಿಕ್ಷಣದ ಗುರಿ. ಪರಿಪೂರ್ಣತೆಯೆ ಆತ್ಮದ ಸ್ವರೂಪ. ಆದ್ದರಿಂದ ಆತ್ಮ ವಿಕಾಸಗೊಂಡಂತೆ ಎಲ್ಲ ಪರಿಪೂರ್ಣತೆಗಳೂ ನಮಗೆ ಬರುವುವು. ಸ್ವಾಮೀಜಿ ಹೇಳುವಂತೆ, "ಸುಪ್ತಾತ್ಮವು ಜಾಗ್ರತವಾಗಿ ಕ್ರಿಯಾಶೀಲವಾದಾಗ ಶಕ್ತಿ, ಒಳ್ಳೆಯತನ, ವೈಭವಗಳು ಬರುತ್ತವೆ, ಉತ್ಕೃಷ್ಟವಾದುದೆಲ್ಲವೂ ಬರುತ್ತವೆ.".

ಈ ಆತ್ಮದ ಪ್ರಕಾಶದಿಂದಲೇ ನಾವು ಎಲ್ಲವನ್ನೂ ತಿಳಿಯುತ್ತಿರುವುದು. ಅದು ಒಂದು ದೀಪವಿದ್ದಂತೆ. ದೀಪದ ಬೆಳಕು ವಸ್ತುವಿನ ಮೂಲಕ ಪ್ರತಿಬಿಂಬಿತವಾಗಿ ಕಣ್ಣನ್ನು ತಲುಪಿದಾಗ ನಮಗೆ ವಸ್ತುವಿನ ಜ್ಞಾನ ಉಂಟಾಗುತ್ತದೆ. ನಿಜವಾಗಿಯೂ ನಾವು ನೋಡುತ್ತಿರುವುದು ಬೆಳಕನ್ನೇ. ಹಾಗೆಯೇ ಆತ್ಮನ ಬೆಳಕು ಅಂತಃಕರಣ ವೃತ್ತಿಗಳ ಮೂಲಕ ಪ್ರತಿಬಿಂಬಿತವಾಗಿ ನಮಗೆ ಜ್ಞಾನವುಂಟಾಗುತ್ತದೆ. ಆದ್ದರಿಂದ ಎಲ್ಲ ಜ್ಞಾನವೂ ಆತ್ಮನಿಂದಲೇ ದೊರೆಯುವುದು. ಕೇನೋಪನಿಷತ್ತಿನಲ್ಲಿ ಒಂದು ಹೇಳಿಕೆ ಇದೆ: ಪ್ರತಿಬೋಧವಿದಿತಂ ಮತಂ, ಅಮೃತತ್ವಂ ಹಿ ವಿಂದತೇ—"ಪ್ರತಿಬೋಧದ ಮೂಲಕವೂ ಅಂದರೆ ಪ್ರತಿ ಜ್ಞಾನದ ಮೂಲಕವೂ ಆತ್ಮವು ತಿಳಿಯಲ್ಪಟ್ಟಾಗ ಅಮೃತತತ್ವವನ್ನು ಪಡೆಯುತ್ತಾನೆ." ಆದ್ದರಿಂದ ಯಾವ ಜ್ಞಾನವೂ ಆತ್ಮಜ್ಞಾನಕ್ಕೆ ವಿರುದ್ಧವಾದುದಲ್ಲ.

> **ಮಗುವು ತನ್ನಲ್ಲಿ ಸುಪ್ತವಾಗಿರುವ ಸಾಮರ್ಥ್ಯಗಳನ್ನು ವ್ಯಕ್ತಪಡಿಸಲು ಸಹಾಯ ಮಾಡುವುದೇ ಶಿಕ್ಷಣ.!** —ಎರಿಕ್ ಫ್ರೋಮ್ (Eric Fromm)

ಆದ್ದರಿಂದ ಶಿಕ್ಷಣವೆಂದರೆ ಹೊರಗಿನಿಂದ ಏನನ್ನೊ ಪಡೆಯುವುದಲ್ಲ. ಶಿಕ್ಷಕ ಮಗುವಿಗೆ ಏನನ್ನೂ ಹೊಸದಾಗಿ ಕಲಿಸುವುದಿಲ್ಲ. ಮಗು ತನ್ನೊಳಗೇ ಇರುವ ಪರಿಪೂರ್ಣತೆಯನ್ನು, ಜ್ಞಾನವನ್ನು ಪ್ರಕಾಶಪಡಿಸಲು ಸಹಾಯ ಮಾಡುವನು. ಈಗ ಒಂದು ಬೀಜವಿದೆ. ಆ ಬೀಜದಲ್ಲಿ ಮರವಾಗಿ ಬೆಳೆಯುವ ಶಕ್ತಿ ಆಗಲೇ ಇದೆ. ನಾವದನ್ನು ನೆಲದಲ್ಲಿ ಬಿತ್ತಿ ನೀರು ಗೊಬ್ಬರ ಹಾಕುತ್ತೇವೆ. ಬೇರೆ ಪ್ರಾಣಿಗಳು ಅದನ್ನು ತಿನ್ನದಿರಲೆಂದು ಒಂದು ಬೇಲಿ ಕಟ್ಟುತ್ತೇವೆ. ಬೀಜ ತಾನಾಗಿಯೇ ಬೆಳೆದು ಗಿಡವಾಗುತ್ತದೆ. ಅದು ಬೆಳೆಯುವುದಕ್ಕೆ ನಾವೊಂದು ಅವಕಾಶ ಕಲ್ಪಿಸಿ ಕೊಡುತ್ತೇವಷ್ಟೆ. ಈ ಸ್ಕೂಲು, ಕಾಲೇಜು, ವಿಶ್ವವಿದ್ಯಾಲಯ—ಇವುಗಳೆಲ್ಲ ಮಗು ಬೆಳೆಯುವುದಕ್ಕೆ—ಅಂದರೆ ತನ್ನೊಳಗಿನ ಶಕ್ತಿಯನ್ನು, ಪ್ರತಿಭೆಯನ್ನು, ಜ್ಞಾನವನ್ನು, ಪರಿಪೂರ್ಣತೆಯನ್ನು ಅಭಿವ್ಯಕ್ತಗೊಳಿಸುವುದಕ್ಕೆ ಕಲ್ಪಿಸಿರುವ ಅವಕಾಶಗಳು.

ಗಿಡವನ್ನು ಸರಿಯಾಗಿ ಬೆಳೆಸಿದರೆ ಅದು ಆರೋಗ್ಯಕರವಾದ ಮರವಾಗಿ ಬೆಳೆದು ಉತ್ತಮ ಫಲವನ್ನು ನೀಡುವುದು. ಹಾಗೆಯೇ

ಎಲ್ಲ ಶಿಕ್ಷಣಸಂಸ್ಥೆಗಳೂ ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ, ಉಪಾಧ್ಯಾಯರೆಲ್ಲ ನಿಷ್ಠೆಯಿಂದ ತಮ್ಮ ಕರ್ತವ್ಯವನ್ನು ಪಾಲಿಸಿದರೆ ಮಗುವೂ ಉತ್ತಮ ಪ್ರಜೆಯಾಗಿ ಬೆಳೆದು, ಸಮಾಜಕ್ಕೆ ಒಳಿತನ್ನುಂಟುಮಾಡುವುದು.

ಸ್ವಾಮಿ ವಿವೇಕಾನಂದರು ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದರು. ದೇಶದ ಜನಸಾಮಾನ್ಯರನ್ನು ಮೇಲೆತ್ತುವುದಕ್ಕೆ ಶಿಕ್ಷಣವೊಂದೇ ಮಹಾಮಂತ್ರ ಎಂದು ಅವರು ಸಾರಿದರು. ಪಾಶ್ಚಾತ್ಯ ದೇಶಗಳಲ್ಲಿ ಓಡಾಡಿದಾಗ ಅಲ್ಲಿಯ ಜನರಿಗೂ ನಮ್ಮ ದೇಶದ ಜನರಿಗೂ ಇರುವ ವ್ಯತ್ಯಾಸ ಅವರಿಗೆ ಸ್ಪಷ್ಟವಾಯಿತು. ಅವರಲ್ಲಿ ವಿದ್ಯೆಯಿತ್ತು, ಐಶ್ವರ್ಯವಿತ್ತು, ಶಕ್ತಿಶಾಲಿಗಳಾಗಿದ್ದರು. ಆದರೆ ನಮ್ಮ ಜನ ದಾರಿದ್ರ್ಯ ಅಜ್ಞಾನದಲ್ಲಿ ನರಳುತ್ತಿದ್ದರು. ಈ ವ್ಯತ್ಯಾಸಕ್ಕೆ ಕಾರಣ ನಮ್ಮ ಜನರಿಗೆ ಶಿಕ್ಷಣವಿಲ್ಲದುದು ಎಂದು ಅವರು ಕಂಡುಕೊಂಡರು. ಜನರಿಗೆ ಶಿಕ್ಷಣವನ್ನು ಕೊಡಿ, ಅವರು ತಮ್ಮ ಸಮಸ್ಯೆ ಯನ್ನು ತಾವೇ ಬಗೆಹರಿಸಿಕೊಳ್ಳುತ್ತಾರೆ ಎಂದರು ಸ್ವಾಮೀಜಿ.

ಕೈಗಾರಿಕಾ ಬೆಳವಣಿಗೆಯೆ ದೇಶದ ಮುಖ್ಯ ಗುರಿಯಾಗಿರುವುದರಿಂದ ಶಿಕ್ಷಣ ಇಂಜಿನಿಯರುಗಳನ್ನು, ವಿಜ್ಞಾನಿಗಳನ್ನು, ತಂತ್ರಜ್ಞರನ್ನು, ಡಾಕ್ಟರುಗಳನ್ನು, ಗುಮಾಸ್ತರನ್ನು ಉತ್ಪಾದಿಸುವುದರಲ್ಲೇ ನಿರತವಾಗಿದೆ, ಮನುಷ್ಯನನ್ನು ನಿರ್ಮಿಸುವುದರಲ್ಲಲ್ಲ. ವ್ಯಕ್ತಿಯ ಸರ್ವತೋಮುಖ ವಿಕಾಸವೇ ಶಿಕ್ಷಣದ ಗುರಿ ಎಂಬುದನ್ನು ಮರತೇಬಿಟ್ಟಂತಿದೆ. ಹೇಗಾದರೂ ಮಾಡಿ ಪರೀಕ್ಷೆಯಲ್ಲಿ ಪಾಸಾಗಿ ಒಂದು ಡಿಗ್ರಿ ಪಡೆದು ಕೆಲಸ ಸಿಕ್ಕಿದರೆ ಸಾಕು ಎಂದೇ ಎಲ್ಲರೂ ಯೋಚಿಸುವುದು. ಹೀಗಾಗಿ ಶಿಕ್ಷಣ ಕೇವಲ ವೃತ್ತಿಪರವಾಗಿದೆಯೇ ಹೊರತು, ಜ್ಞಾನಪರವಾಗಿಲ್ಲ. ಯುನೆಸ್ಕೊ ನಿಯಮಿಸಿದ ಒಂದು ಶಿಕ್ಷಣ ಆಯೋಗದ ವರದಿಯು ಶಿಕ್ಷಣದ ಧೋರಣೆಯನ್ನು ಒಂದು ಸುಂದರವಾದ ಸೂತ್ರರೂಪದಲ್ಲಿ ಹೇಳಿದೆ: "Learn *to be* as contrast to learn *to do*" —(ಕರ್ಮವನ್ನಲ್ಲ, ಜೀವನಮರ್ಮವನ್ನು ಕಲಿಸುವುದು ಶಿಕ್ಷಣದ ಗುರಿ.) ವೃತ್ತಿಪರ ಶಿಕ್ಷಣ ವ್ಯಕ್ತಿ ಪರವೂ ಆಗದಿದ್ದರೆ ಅನೈತಿಕತೆಯ ಹೆಚ್ಚಳದಿಂದ ವೃತ್ತಿಯೂ ಸಾರ್ಥಕತೆಯನ್ನು ಪಡೆಯುವುದಿಲ್ಲ.

ವಿವೇಕಾನಂದರ ಪ್ರಕಾರ ಶಿಕ್ಷಣದ ಮುಖ್ಯ ಗುರಿ ಮೂರು ಎನ್ನಬಹುದು. ಮೊದಲನೆಯದಾಗಿ ಶಿಕ್ಷಣ ಮನುಷ್ಯನನ್ನು ಸ್ವಾವಲಂಬಿಯನ್ನಾಗಿ ಮಾಡಬೇಕು—ತನ್ನ ಕಾಲ ಮೇಲೆ ತಾನು ನಿಲ್ಲುವಂತಾಗಬೇಕು. ಬಿ.ಎ, ಎಂ.ಎ ಪಾಸು ಮಾಡಿ ಆಫೀಸಿನಿಂದ ಆಫೀಸಿಗೆ ಅಲೆಯುವಂತಾಗಬಾರದು. ತನಗೆ ತಾನೇ ಉದ್ಯೋಗವನ್ನು ಸೃಷ್ಟಿಸಿಕೊಳ್ಳುವಂತಹ ಸಾಮರ್ಥ್ಯ ಅವನಿಗೆ ಶಿಕ್ಷಣದಿಂದ ದೊರೆಯಬೇಕು. ಬಾಹ್ಯ ಸ್ವಾವಲಂಬನೆ ಮಾತ್ರವಲ್ಲ, ವೈಚಾರಿಕ ಸ್ವಾವಲಂಬನೆಯೂ ಅವನಲ್ಲುಂಟಾಗಬೇಕು. ತಾನೇ ಸ್ವತಂತ್ರವಾಗಿ ವಿಚಾರ ಮಾಡಿ ಯಾವುದು ಸರಿ ಯಾವುದು ತಪ್ಪು ಎಂಬುದನ್ನು ನಿರ್ಣಯಿಸುವ ಸಾಮರ್ಥ್ಯ ಅವನಿಗೆ ಬರಬೇಕು. ಈಗ ವೈಚಾರಿಕ ಪರಿಧಿ ಬಹಳ ವಿಸ್ತಾರವಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ಅನೇಕ ಮತಪಂಥಗಳು ಹುಟ್ಟಿಕೊಂಡಿವೆ. ಹಲವಾರು ಪ್ರಭಾವಗಳಿಗೆ ಮನುಷ್ಯ ಒಳಗಾಗುತ್ತಾನೆ. ಸ್ವತಂತ್ರ ವಿಚಾರಧಾರೆ ಇಲ್ಲದಿದ್ದರೆ ನಾವು ಗಾಳಿಗೆ ತೂರಾಡುವ ಎಲೆಯಂತಾಗಿಬಿಡುತ್ತೇವೆ. ಶಿಕ್ಷಣ ಈ ದೃಷ್ಟಿಯಲ್ಲೂ ನಮ್ಮನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕು.

**ಸ್ವಾತಂತ್ರ್ಯವೆಂದರೆ ತನ್ನ ಬೆಳವಣಿಗೆಯನ್ನು ತಾನೇ ನೋಡಿಕೊಳ್ಳುವ ಸಾಮರ್ಥ್ಯ —ನಮ್ಮನ್ನು ನಾವು ರೂಪಿಸಿಕೊಳ್ಳುವ ಸಾಮರ್ಥ್ಯ.**

—ರೋಲೊ ಮೇ (Rollo May)

ಶಿಕ್ಷಣದ ಇನ್ನೊಂದು ಮುಖ್ಯ ಗುರಿ ಶೀಲನಿರ್ಮಾಣ. ಸ್ವಾಮೀಜಿ ಹೇಳುತ್ತಾರೆ: "ನಮ್ಮ ಜೀವನವನ್ನು ನಿರ್ಮಿಸುವ, ಮನುಷ್ಯ ನಿರ್ಮಾಣದ ಮತ್ತು ಚಾರಿತ್ರ್ಯ ರೂಪಿಸುವ ರೀತಿಯಲ್ಲಿ ನಾವು ವಿಚಾರಗಳನ್ನು ಅರಗಿಸಿಕೊಳ್ಳಬೇಕು. ನೀವು ಐದು ವಿಚಾರಗಳನ್ನು ಅರಗಿಸಿಕೊಂಡು, ನಿಮ್ಮ ಜೀವನದ, ಶೀಲದ ಅಂಗವನ್ನಾಗಿ ಮಾಡಿಕೊಂಡಿದ್ದರೆ ಇಡೀ ಗ್ರಂಥಾಲಯವನ್ನೇ ಕಂಠಪಾಠಮಾಡಿಕೊಂಡವನಿಗಿಂತ ಹೆಚ್ಚು ವಿದ್ಯಾವಂತರಾಗಿರುತ್ತೀರಿ." ನೈತಿಕ ಪರಿಪೂರ್ಣತೆ ಇಲ್ಲದೆ ನಾವು ಪಡೆದ ಜ್ಞಾನವನ್ನು ಸರಿಯಾದ ರೀತಿಯಲ್ಲಿ, ಸೃಜನಾತ್ಮಕವಾಗಿ ಉಪಯೋಗಿಸಲಾಗುವುದಿಲ್ಲ. ನಮ್ಮ ಮೇಲೆ ನಮಗೆ ಹತೋಟಿಯಿರುವುದಿಲ್ಲ. ನೈತಿಕ ತಳಹದಿಯಿಲ್ಲದೆ ಹಿಂದೆ ಹೇಳಿದ ವಿಚಾರ ಸ್ವಾತಂತ್ರ್ಯ ನಮ್ಮನ್ನು ಎಲ್ಲೆಂದರಲ್ಲಿಗೆ ಒಯ್ಯಬಹುದು. ಅದು ನಮ್ಮನ್ನು ವಿನಾಶದೆಡೆಗೇ ಒಯ್ಯಬಹುದು. ನೈತಿಕತೆ ಅದಕ್ಕೆ ಕಡಿವಾಣದಂತಿರುತ್ತದೆ.

ನೈತಿಕತೆಯಿಲ್ಲದೆ ಈ ಅಪಾರ ಯುವಶಕ್ತಿ ವಿನಾಶಕರ ಶಕ್ತಿಯಾಗಿ ಪರಿಣಮಿಸುವ ಸಂಭವ ಹೆಚ್ಚು. ನೈತಿಕಪ್ರಜ್ಞೆ ನಮ್ಮನ್ನು ಜವಾಬ್ದಾರಿಯುತರನ್ನಾಗಿ ಮಾಡುವುದು. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ಜವಾಬ್ದಾರಿಯನ್ನು ಮನಗಂಡರೆ ಮುಷ್ಕರ, ಘೆರಾವ್, ಹೊಡೆದಾಟ—ಇವೆಲ್ಲ ಎಷ್ಟೊ ಕಡಿಮೆಯಾಗುವುವು. ಇಂಗ್ಲಿಷ್‌ನಲ್ಲಿ ತೊಂದರೆ ಕೊಡುವವರನ್ನು ಕುರಿತಾದ ಒಂದು ಮಾತಿದೆ—The man who rows the boat, seldom has time to rock it.– "ದೋಣಿ ನಡೆಸುವವನು ಅದನ್ನು ಮುಳುಗಿಸುವ ಪ್ರಯತ್ನ ಎಂದೂ ಮಾಡುವುದಿಲ್ಲ." ಜವಾಬ್ದಾರಿಯ ಪ್ರಜ್ಞೆಯುಳ್ಳವನಾವನೂ ವಿನಾಶಾತ್ಮಕ ಕಾರ್ಯದಲ್ಲಿ ತೊಡಗುವುದಿಲ್ಲ, ಯಾವಾಗಲೂ ರಚನಾತ್ಮಕ ಕಾರ್ಯದಲ್ಲೇ ತೊಡಗಿರುತ್ತಾನೆ. ಹೀಗೆ ಶಿಕ್ಷಣ ನಮ್ಮನ್ನು ಜವಾಬ್ದಾರಿಯುತ ನಾಗರಿಕರನ್ನಾಗಿ ಮಾಡಬೇಕು. ಇದಕ್ಕೆ ನೈತಿಕ ತರಬೇತಿ ಅತ್ಯಾವಶ್ಯಕ.

ಶಿಕ್ಷಣದ ಮೂರನೆಯ ಮುಖ್ಯ ಗುರಿ ನಮ್ಮ ಆಂತರಿಕ ಸಾಮರ್ಥ್ಯವನ್ನೂ ಪ್ರತಿಭೆಯನ್ನೂ ಪವಿತ್ರತೆಯನ್ನೂ ದಿವ್ಯತೆಯನ್ನೂ ಹೊರಸೂಸುವುದು. ಮಗುವಿನಲ್ಲಿ ಸುಪ್ತವಾಗಿ ಅಡಗಿರುವ ಈ ಗುಣಗಳು ಹೊರಬರಲು ಶಿಕ್ಷಣ ಸಹಾಯಕವಾಗಬೇಕು. ಇದನ್ನೇ ಪಾಶ್ಚಾತ್ಯ ಶಿಕ್ಷಣ ತಜ್ಞರು self realization ಅಥವಾ ಆತ್ಮಸಾಕ್ಷಾತ್ಕಾರ ಎನ್ನುತ್ತಾರೆ. ಇಲ್ಲಿ ಆತ್ಮಸಾಕ್ಷಾತ್ಕಾರವೆಂದರೆ ತಮ್ಮ ಅಂತರಾತ್ಮವನ್ನು ಅರಿಯುವುದೆಂದಲ್ಲ. ಅವರ ಪ್ರಕಾರ ನಮ್ಮೊಳಗೇ ಇರುವ ಶಕ್ತಿ, ಸಾಮರ್ಥ್ಯ, ಪ್ರತಿಭೆ, ಇವುಗಳ ಅಭಿವ್ಯಕ್ತಿಯೇ, ಪ್ರಕಾಶವೇ self-realization. ಸ್ವಾಮೀಜಿ ಪ್ರಕಾರ ಇವೆಲ್ಲ ಆತ್ಮದ ಗುಣಗಳು, ಆತ್ಮಜಾಗೃತವಾದಂತೆ ಇವೆಲ್ಲ ಹೊರಬರುವುವು. ಒಂದು ಹೂವು ಮೊಗ್ಗಾಗಿರುವಾಗ ಅದರ ಸುವಾಸನೆ, ಸೌಂದರ್ಯ ಯಾವುದೂ ತಿಳಿಯುವುದಿಲ್ಲ. ಅದು ಅರಳಿದಂತೆಲ್ಲ ಅದರ ಎಲ್ಲ ಗುಣಗಳೂ ಹೊರಬರುವುವು. ಹಾಗೆಯೇ ನಮ್ಮ ಅಂತರಾತ್ಮವು ಅರಳಿದಾಗ, ನಮ್ಮ ದಿವ್ಯತೆಯ ಪ್ರಜ್ಞೆ ನಮಗಾದಾಗ, ಶಕ್ತಿ, ಸಾಮರ್ಥ್ಯ, ಪವಿತ್ರತೆ, ಪರಿಪೂರ್ಣತೆ ಎಲ್ಲ ಬರುವುವು. ಇದು ಶಿಕ್ಷಣದ ಒಂದು ಬಹು ಮುಖ್ಯ ಗುರಿ. ಅದಕ್ಕಾಗಿಯೇ ಸ್ವಾಮೀಜಿ ಧರ್ಮವೇ ಶಿಕ್ಷಣದ ತಳಹದಿ ಎಂದರು—"I look upon religion as the innermost core of education." ಆದ್ದರಿಂದ ಧರ್ಮದ ಹಿನ್ನೆಲೆ ಅತ್ಯಗತ್ಯ. ಇಲ್ಲಿ ಧರ್ಮವೆಂದರೆ ಮತಾಚರಣೆಗಳಲ್ಲ—ಸಾಧನೆಗಳ ಮೂಲಕ ಆತ್ಮಪ್ರಕಾಶವನ್ನು ಹೊರಹೊಮ್ಮಿಸುವುದು.

ಈ ಮೂರು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳು ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು.

---

### ನ್ಯಾಯಾಧೀಶರ ಔದಾರ್ಯ

ಸಾಯಂಕಾಲವಾಗುತ್ತಿತ್ತು. ಬೊಂಬಾಯಿಯ (ಈಗಿನ ಮುಂಬೈ) ಉಚ್ಚ ನ್ಯಾಯಾಲಯದಲ್ಲಿ ತಮ್ಮ ಕೆಲಸವನ್ನು ಮುಗಿಸಿಕೊಂಡು ಪ್ರತಿಷ್ಠಿತ ನ್ಯಾಯಾಧೀಶರೊಬ್ಬರು ತಮ್ಮ ಮನೆಗೆ ಹಿಂದಿರುಗುತ್ತಿದ್ದರು. ರಸ್ತೆಯಲ್ಲಿ ಮುದುಕಿಯೊಬ್ಬಳು ಕಟ್ಟಿಗೆಯ ದೊಡ್ಡ ಹೊರೆಯನ್ನು ರಸ್ತೆಯ ಒಂದು ಪಕ್ಕದಲ್ಲಿಟ್ಟುಕೊಂಡು ನಿಂತಿದ್ದಳು. ಅವಳು ರಸ್ತೆಯಲ್ಲಿ ಹೋಗುತ್ತಿರುವವರೊಡನೆ, "ಸ್ವಾಮಿ, ದಯವಿಟ್ಟು ಈ ಹೊರೆಯನ್ನು ನನ್ನ ತಲೆಯ ಮೇಲಿರಿಸಿಕೊಡಿ; ತುಂಬಾ ಉಪಕಾರವಾದಂತಾಗುತ್ತದೆ," ಎಂದು ವಿನಂತಿಸಿಕೊಳ್ಳುತ್ತಿದ್ದಳು.

ಆದರೆ ಎಲ್ಲರೂ ಅವಳ ಮಾತು ಕೇಳಿಸದವರಂತೆ ಮುಂದೆ ಸಾಗುತ್ತಿದ್ದರು. ಈ ನ್ಯಾಯಾಧೀಶ ಮಹಾಶಯರು ದಾರಿಯಲ್ಲಿ ನಿಂತು ಅವಳ ಬೇಡಿಕೆಯನ್ನು ಕೇಳಿಸಿಕೊಂಡು, ಸೌದೆಯ ಹೊರೆಯನ್ನು ಎತ್ತಿ ಅವಳ ತಲೆಯ ಮೇಲಿರಿಸಿದರು. ಆ ಮಹಾನ್ ವ್ಯಕ್ತಿಯೆ ಶ್ರೀ ಮಹಾದೇವ ಗೋವಿಂದ ರಾನಡೆಯವರು!

### ವಿಶಿಷ್ಟ ವಿದ್ಯಾರ್ಥಿ

ಭಾರತದ ಯಶಸ್ವೀ ಗಣಿತಜ್ಞರೂ ಶಿಕ್ಷಣತಜ್ಞರೂ ಪುಣೆ ವಿಶ್ವವಿದ್ಯಾನಿಲಯದ ಹಿಂದಿನ ಉಪಕುಲಪತಿಗಳೂ ಆಗಿದ್ದ ಡಾಕ್ಟರ್ ರಘುನಾಥ ಪುರುಷೋತ್ತಮ ಪರಾಂಜಪೆಯವರ ವಿದ್ಯಾರ್ಥಿದೆಸೆಗೆ ಸಂಬಂಧಪಟ್ಟಿದ್ದು ಇದು.

ಹತ್ತನೇ ಇಯತ್ತೆಯ ವಾರ್ಷಿಕ ಪರೀಕ್ಷೆಯಲ್ಲಿ ಪರಾಂಜಪೆಯವರು ರೇಖಾಗಣಿತದ ಉತ್ತರಪತ್ರಿಕೆಯನ್ನು ಕೇವಲ ಒಂದೂ ಮುಕ್ಕಾಲು ಗಂಟೆಗಳಲ್ಲಿ ಬರೆದು ಪರೀಕ್ಷಾಕೊಠಡಿಯಿಂದ ಹೊರಬಿದ್ದರು. ರಸ್ತೆಯಲ್ಲಿ ರಾವ್ ಸಾಹೇಬ್ ಸಾಠೆಯವರು ಸಿಕ್ಕಿ, "ನೀನು ಹೀಗೇಕೆ ಮಾಡಿದೆ?"—ಎಂದು ಕೇಳಿದರು. ಪರಾಂಜಪೆಯವರು, "ನಾನು ಪೂರ್ಣವಾಗಿ ಉತ್ತರಗಳನ್ನು ಬರೆದೇ ಬಂದಿದ್ದೇನೆ," ಎಂದುತ್ತರಿಸಿದರು. ಆದರೂ ರಾವ್ ಸಾಹೇಬರು, "ನೀನು ಮಾಡಿದ್ದು ದೊಡ್ಡ ತಪ್ಪು. ನಿರೀಕ್ಷಕರು ನಿನ್ನ ಉತ್ತರ ಪತ್ರಿಕೆಯನ್ನು ಕಟ್ಟಿನಲ್ಲಿ ಸೇರಿಸಲು ಮರೆತರೆ ಏನು ಮಾಡುವುದು?" ಎಂದು ಪ್ರಶ್ನಿಸಿದರು.

ಹಾಗಾಗಿ ಪರಾಂಜಪೆಯವರು ಪರೀಕ್ಷೆ ಪರಿಣಾಮ ಬರುವವರೆಗೂ ಚಿಂತಿತರಾಗಿಯೇ ಇದ್ದರು. ಕೊನೆಗೂ ಪರೀಕ್ಷೆ ಪರಿಣಾಮವನ್ನು ಘೋಷಿಸಲಾಯಿತು. ಪ್ರಥಮ ಶ್ರೇಣಿಯಲ್ಲಿ ಪರಾಂಜಪೆಯವರು ಪಾಸಾಗಿದ್ದರು! ಅಂಕಪಟ್ಟಿ ಬಂದು ಅದನ್ನು ನೋಡಿದಾಗ ಪರಾಂಜಪೆಯವರಿಗೆ ರೇಖಾಗಣಿತದಲ್ಲಿ ನೂರಕ್ಕೆ ನೂರು ಅಂಕಗಳು ಬಂದಿದ್ದವು!

### ನಿಸ್ಪೃಹತೆಯ ಪರಾಕಾಷ್ಠೆ

ಬಂಗಾಳದ ನ್ಯಾಯಾಧೀಶರಾದ ನೀಲಮಾಧವ ವಂದ್ಯೋಪಾಧ್ಯಾಯರು ತಮ್ಮ ವೃದ್ಧಾಪ್ಯದಲ್ಲಿ, ತಾವು ಆರೋಗ್ಯದಿಂದಿದ್ದಾಗ, ೫೦೦೦ ರೂಪಾಯಿಗಳಿಗೆ ವಿಮೆ ಮಾಡಿಸಿದ್ದರು. ನಂತರ ಸಿಹಿಮೂತ್ರರೋಗಪೀಡಿತರಾದ ಮೇಲೂ ಅವರು ವಿಮಾ ಕಂತುಗಳನ್ನು ಕಟ್ಟುತ್ತಿದ್ದರು; ವಿಮೆಯನ್ನು ಸ್ಥಗಿತಗೊಳಿಸಿರಲಿಲ್ಲ.

ಈ ಬಗೆಗೆ ಪಶ್ಚಾತ್ತಾಪ ವ್ಯಕ್ತಪಡಿಸುತ್ತ ಅವರು ಒಂದು ದಿನ ತಮ್ಮ ಒಬ್ಬ ಮಿತ್ರರೊಡನೆ, "ನ್ಯಾಯಾಧೀಶನಾಗಿ ನಿಸ್ಪೃಹತೆಯಿಂದ ಕೆಲಸ ಮಾಡಿದ ನಾನು, ಈ ವಿಮೆ ವಿಚಾರದಲ್ಲಿ ಮಾತ್ರ ನಿಸ್ಪೃಹನಾಗಲಿಲ್ಲ. ಆದುದರಿಂದ ಈಗಿಂದೀಗಲೇ ವಿಮೆ ಅಧಿಕಾರಿಗಳನ್ನು ಕರೆದು ಈ ವಿಮೆಯನ್ನು ರದ್ದು ಮಾಡಿ, ಈ ಹಣವನ್ನು ನನ್ನ ಉತ್ತರಾಧಿಕಾರಿಗಳಿಗೆ ಸಿಗದಂತೆ ಮಾಡಿ. ಆಗಲೇ ನನಗೆ ನನ್ನ ಅಂತ್ಯ ಕಾಲದಲ್ಲಿ ಶಾಂತಿ ಸಿಗುತ್ತದೆ," ಎಂದು ಹೇಳಿದರಂತೆ!

*(ಸಂಗ್ರಹ: ಎಸ್. ವಿಶ್ವನಾಥ ಮಧ್ಯ)*